NAVIKA KANNADA

ದಿನಾಂಕ: 19 ಫೆಬ್ರವರಿ 2011 ಶನಿವಾರ

Page.No-1

# ಎಲ್ಲಾ ಧರ್ಮಗಳ ಗುರಿ ಒಂದೇ: ವೈಶಾಲಿ




ಶಿವಮೊಗ್ಗ,ಫೆ.19: ನದಿಗಳು ಎಲ್ಲೇ ಹುಟ್ಟಿ ಎಲ್ಲೇ ಹರಿದರೂ ಕೊನೆಗೆ ಸಾಗರ ಸೇರುತ್ತವೆ. ಎಲ್ಲಾ ಧರ್ಮಗಳ ಗುರಿಯೂ ಒಂದೇ ಎಂದು ಉಪ ವಿಭಾಗಾಧಿಕಾರಿ ಎಂ.ಎಲ್. ವೈಶಾಲಿ ಅಭಿಪ್ರಾಯ ಪಟ್ಟರು.

ಕುವೆಂಪು ವಿವಿ ಇತಿಹಾಸ ವೇದಿಕೆ, ಸ್ಥಳೀಯ ಸಂಸ್ಕೃತಿ ಅಧ್ಯಯನ ಕೇಂದ್ರ, ಡಿ.ವಿ.ಎಸ್.ಕಲಾ ಮತ್ತು ವಿಜ್ಞಾನ ಕಾಲೇಜಿನ ಆಶ್ರಯದಲ್ಲಿ ಡಿವಿಎಸ್ ಕಾಲೇಜಿನ 'ಚಂದನ' ಸಭಾಂಗಣದಲ್ಲಿ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. (4ನೇ ಪುಟಕ್ಕೆ)

ಎಲ್ಲಾ ಧರ್ಮಗಳ ಗುರಿ ಒಂದೇ: ವೈಶಾಲಿ

(ಮೊದಲ ಪುಟದಿಂದ)

'ಭಾರತದ ಧರ್ಮ ಮತ್ತು ಸಂಸ್ಕೃತಿ ಹೊಸ ದೃಷ್ಟಿಕೋನ' ಯಾವುದು ಒಳ್ಳೆಯದೋ ಅದೇ ಧರ್ಮ. ಯಾವ ಧರ್ಮವೂ ಕೆಟ್ಟದ್ದನ್ನು ಮಾಡುವಂತೆ ಹೇಳುವುದಿಲ್ಲ. ಭಾರತೀಯರಾದ ನಾವು ಎಲ್ಲಾ ಧರ್ಮಗಳನ್ನೂ ಸಹಿಷ್ಣುತೆಯಿಂದ ಕಾಣುತ್ತೇವೆ ಇದು ಭಾರತೀಯರ ಸುಸಂಸ್ಕೃತ ಭಾವನೆ ಗಳಿಗೆ ಹಿಡಿದ ಕನ್ನಡಿಯೆಂದರು.

ಧರ್ಮ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಎರಡೂ ಒಂದನ್ನೊಂದು ಬಿಟ್ಟಿರಲಾರವು. ಮನುಷ್ಯ ಎಷ್ಟೇ ಆಸ್ತಿ ಅಂತಸ್ತು ಗಳಿಸಿದರೂ ಅದು ಉಳಿಯುವುದಿಲ್ಲ, ಅವನು ಸಾಂಸ್ಕೃತಿಕವಾಗಿ-ಧಾರ್ಮಿಕವಾಗಿ ಮಾಡಿದ ಸಾಧನೆಗಳು ಮಾತ್ರ ಎಂದಿಗೂ ಉಳಿಯುತ್ತವೆ ಎಂದ ಅವರು, ವಿಚಾರ ಸಂಕಿರಣದಲ್ಲಿ ಸಂಕುಚಿತ ಮನೋ ಭಾವ ಬಿಟ್ಟು ಮುಕ್ತವಾದ ಮನಸ್ಸಿ ನಿಂದ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇದಕ್ಕೂ ಮೊದಲು ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರೊ.ಕೆ.ಜಿ. ವೆಂಕಟೇಶ್, ಭಾರತದಲ್ಲಿರುವ ಧರ್ಮಗಳನ್ನು 'ರಿಲಿಜಿಯನ್' ಎಂದು ಅರ್ಥ ಮಾಡಿಕೊಳ್ಳಬಾರದು, ಅದು ವಸಾಹತುಶಾಹಿತ್ವದಿಂದ ನಮಗೆ ಬಂದ ಬಳುವಳಿಯಾಗಿದೆ. ಈ ನಿಟ್ಟಿನಲ್ಲಿ ಪ್ರೊ.ಬಾಲಗಂಗಾಧರ ಅವರ ಚಿಂತನೆಗಳು ನಮಗೆ ನಮ್ಮ ಸಮಾಜವನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಿವೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ.ರಾಜಾರಾಮ ಹೆಗಡೆಯವರು ಮಾತನಾಡಿ, ಇಂದು ಧರ್ಮ ಎಂದು ಭಾರತದಲ್ಲಿ ಮಾತನಾಡುತ್ತಿರುವುದು ನಮ್ಮಲ್ಲಿರುವ ಸಂಪ್ರದಾಯಗಳ ಕುರಿತು ಅಲ್ಲ. ಪಾಶ್ಚಾತ್ಯರು ನಮ್ಮ ಸಂಸ್ಕೃತಿಯನ್ನು ನೋಡಿ ತಮಗನಿಸಿದ್ದನ್ನೇ ನಾವು ಸತ್ಯ ಎಂದು ಒಪ್ಪಿಕೊಂಡು ಮಾತನಾಡುತ್ತಿದ್ದೇವೆ. ಆದರೆ, ನಾವು ಏನು ಎಂದು ನಾವೇ ಹೇಳಿಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಡಂಕಿನ್ ಜಳಕಿ, ಪ್ರೊ.ಟಿ.ಎಸ್.ಗೋಪಾಲ್ ಇದ್ದರು. ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಎಂ. ಹೊಸೂರು ಅಧ್ಯಕ್ಷತೆ ವಹಿಸಿದ್ದರು.